# ಹೋಮ್‌ವರ್ಕ್ ಎಂಬ ಹೊಟ್ಟೆನೋವು!





ಶಾಲೆಗಳಲ್ಲಿ ಹೆಚ್ಚೂ ಕಡಿಮೆ 6 ಗಂಟೆಗಳ ಕಾಲ ಪಾಠದಲ್ಲಿ ತಲ್ಲೀನರಾಗುವ ಮಕ್ಕಳು ಮನೆಗೆ ಬಂದು ಮತ್ತೆ ಇಡೀ ರಾತ್ರಿ ಹೋಮ್‌ವರ್ಕ್ ಮಾಡಬೇಕೆಂದರೆ ಹೇಗೆ?

■ ಎಸ್.ಬಿ.ಜೋಗುರ

ಪ್ರಾಥಮಿಕ ತರಗತಿಯ ಮಕ್ಕಳಿಗೆ ಹೆಚ್ಚು ಹೋಮ್‌ವರ್ಕ್ ಕೊಡುವುದರಲ್ಲಿ ಅರ್ಥವಿಲ್ಲ. ಏಕೆಂದರೆ ಈ ವಯಸ್ಸಿನ ಮಕ್ಕಳ ಬೌದ್ಧಿಕ ಸಾಮರ್ಥ್ಯ ಕಡಿಮೆಯೇ. ಶಾಲೆಗಳಲ್ಲಿ ಹೆಚ್ಚೂ ಕಡಿಮೆ 6 ಗಂಟೆಗಳ ಕಾಲ ಪಾಠದಲ್ಲಿ ತಲ್ಲೀನರಾಗುವ ಈ ಮಕ್ಕಳು ಮತ್ತೆ ಮನೆಗೆ ಬಂದು ಇಡೀ ರಾತ್ರಿ ಹೋಮ್‌ವರ್ಕ್ ಮಾಡಬೇಕೆಂದರೆ ಹೇಗೆ? ಅದೊಂದು ಹೊರೆಯೇ. ಮಿಸ್ಸೂರಿ ವಿಶ್ವವಿದ್ಯಾಲಯ ನಡೆಸಿದ ಅಧ್ಯಯನದ ಪ್ರಕಾರ, ಹೋಮ್‌ವರ್ಕ್ ಎನ್ನುವುದು ಪ್ರಾಥಮಿಕ ಹಂತಕ್ಕಿಂತ ಮಾಧ್ಯಮಿಕ ಹಂತಕ್ಕೆ ಅಗತ್ಯವಿದೆ.

ಒಂದರಿಂದ ನಾಲ್ಕನೇ ತರಗತಿವರೆಗೆ ಕಲಿಯುವ ಮಕ್ಕಳು ಶಾಲೆ ಬಿಟ್ಟು ಮನೆಗೆ ಬಂದ ಬಳಿಕ ಉಲ್ಲಾಸದ ದಾರಿಗಳನ್ನು ಹುಡುಕುತ್ತಾರೆ. ಚಿಂತಕ ಹ್ಯಾರಿಸ್ ಕೂಪರ್ ಪ್ರಕಾರ– 'ಮನೆಯಲ್ಲಿ ಕುಟುಂಬದ ಸದಸ್ಯರ ಜತೆ ಉಲ್ಲಾಸದಿಂದ ಒಡನಾಡುವ, ಆಟದೊಂದಿಗೆ ಉಲ್ಲಸಿತರಾಗುವ ಸಮಯವನ್ನು ಹೋಮ್‌ವರ್ಕ್ ಕಬಳಿಸುತ್ತದೆ.' ಪ್ರಾಥಮಿಕ ಹಂತದ ಮಕ್ಕಳಿಗೆ ಹೋಮ್‌ವರ್ಕ್ ಒಂದು ಉದ್ವೇಗದ ಸಂಗತಿಯಾಗಿ ಪರಿಣಮಿಸಿದೆ ಎನ್ನುತ್ತಾರೆ ತಜ್ಞರು. ಟೊರೆಂಟೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಕೆಮರಾನ್ ಮತ್ತು ಬಾರ್ಟೆಲ್ ಅವರು, ಯಾವ ಹಂತದ ಮಕ್ಕಳಿಗೆ ಎಷ್ಟು ಸಮಯದ ಹೋಮ್‌ವರ್ಕ್ ಸರಿ ಎನ್ನುವ ಅಧ್ಯಯನವೊಂದನ್ನು ಮಾಡಿ ದೈನಂದಿನ ಪಟ್ಟಿಯನ್ನೇ ಕೊಟ್ಟಿದ್ದಾರೆ. ಅವರ ಪ್ರಕಾರ,

- 1 ರಿಂದ 3 ನೇ ತರಗತಿಯ ಮಕ್ಕಳಿಗೆ 10 ರಿಂದ 30 ನಿಮಿಷದ ಹೋಮ್ ವರ್ಕ್ ಸಾಕು.
- 4 ರಿಂದ 6 ನೇ ತರಗತಿಯ ಮಕ್ಕಳಿಗೆ 30 ರಿಂದ 60 ನಿಮಿಷಗಳ ಹೋಮ್‌ವರ್ಕ್ ಸಾಕು.
- 7 ರಿಂದ 9 ನೇ ತರಗತಿಯ ಮಕ್ಕಳಿಗೆ 45 ರಿಂದ 90 ನಿಮಿಷಗಳ ಹೋಮ್‌ವರ್ಕ್ ಬೇಕು.
- 9ನೇ ತರಗತಿ ನಂತರದ ಮಕ್ಕಳಿಗೆ 120 ನಿಮಿಷಗಳ ಮೇಲೆ ಹೋಮ್ ವರ್ಕ್ ಕೊಟ್ಟರೂ ನಡೆಯುತ್ತದೆ.




ಅತಿಯಾದ ಹೋಮ್ ವರ್ಕ್ ಎಳೆಯ ಮಕ್ಕಳ ಮಾನಸಿಕ ಖಿನ್ನತೆಗೆ ಕಾರಣವಾಗುತ್ತದೆ ಎಂದೂ ತಜ್ಞರು ಎಚ್ಚರಿಸಿದ್ದಾರೆ.

'ಇಂಟರನ್ಯಾಷನಲ್ ಜರ್ನಲ್ ಆಫ್ ಬಿಹೇವಿಯರಲ್ ಸೈನ್ಸಸ್' ಪತ್ರಿಕೆ ಹೊರ ಹಾಕಿರುವ ಮಾಹಿತಿಯಂತೆ, ಭಾರತೀಯ ಮಾಧ್ಯಮಿಕ ಶಾಲೆಗಳಲ್ಲಿ ಅತ್ಯಂತ ತೀವ್ರವಾದ ಸ್ಪರ್ಧಾತ್ಮಕ ಪರಿಸರವಿದೆ. ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಹುಡುಗಿಯರು ಹುಡುಗರಿಗಿಂತಲೂ ಹೆಚ್ಚು ಕಷ್ಟ ಪಡುವುದಿದೆ. ಈ ಬಗೆಯ ಹೋಮ್ ವರ್ಕ್ ಒತ್ತಡ ಅವರ ಮಾನಸಿಕ ಸ್ಥಿತಿಗತಿಗಳ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆ ಎಂದು ಆ ವರದಿ ಹೇಳಿದೆ.

## 'ನಲಿ ಕಲಿ' ವಿಧಾನ

ನಮ್ಮ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಜಾರಿಯಲ್ಲಿರುವ ನಲಿ–ಕಲಿ ಯೋಜನೆ ನಿಜವಾಗಿಯೂ ಈ ಹೋಮ್‌ವರ್ಕ್ ಹೊರೆಗೆ ಒಂದು ಅತ್ಯುತ್ತಮ ಪರಿಹಾರ ಮಾರ್ಗ. ಪ್ರಾಚೀನ ಗ್ರೀಕ್ ದಾರ್ಶನಿಕ ಪ್ಲೇಟೊ ಕೂಡಾ ಈ ಬಗೆಯ ವಿಧಾನವನ್ನೇ ತನ್ನ 'ಆದರ್ಶ ರಾಜ್ಯದ ಶಿಕ್ಷಣ'ದಲ್ಲಿ ಸೂಚಿಸಿದ್ದ. ಆದರೆ ಈ ಯೋಜನೆ ಶಿಕ್ಷಕರ ಪ್ರಾಮಾಣಿಕ ಪ್ರಯತ್ನದ ನಡುವೆಯೂ ನಿರೀಕ್ಷಿಸಿದ ರೀತಿಯಲ್ಲಿ ಗಮನ ಸೆಳೆಯುತ್ತಿಲ್ಲ. ಬದಲಾಗಿ ಪ್ರತಿಷ್ಠಿತ ಎಂಬ ಲೇಬಲ್ ಹೊಂದಿರುವ ಖಾಸಗೀ ಶಾಲೆಗಳ ಅತಿಯಾದ ಹೋಮ್‌ವರ್ಕ್ ಪದ್ಧತಿಯೇ ಅಂತಿಮವಾಗಿ ಫಲಿತಾಂಶದಲ್ಲಿ ಗೆಲ್ಲುತ್ತಿದೆ.

ಹೆಚ್ಚು ಹೋಮ್‌ವರ್ಕ್ ನೀಡುವುದು ಶಿಕ್ಷಣದ ಸುಧಾರಣೆ ಎಂಬ ಕಲ್ಪನೆ ತಪ್ಪು. ಸುಧಾರಣೆ ನಡೆಯುವುದು ತರಗತಿಯಲ್ಲಿ ಹೊಸ ಪ್ರಗತಿಪರ ಪ್ರಯೋಗಗಳನ್ನು ಪರಿಚಯಿಸುವ ಮೂಲಕ. ಮಗುವಿಗೆ ಅರ್ಥವಾಗದ ನಾಲ್ಕು ಸಾಲನ್ನು ಹತ್ತು ಬಾರಿ ಬರೆಸಿದರೂ, ಅದರ ಒಳಾರ್ಥ ಅದಕ್ಕೆ ತಿಳಿಯುವುದಿಲ್ಲ. ಹಾಗಾಗಿಯೇ ಹೋಮ್ ವರ್ಕ್ ಎನ್ನುವುದೇ ಅಂತಿಮ ಸುಧಾರಣಾ ಸೂತ್ರವಲ್ಲ.

ರಜಾದಿನಗಳಲ್ಲಿ ಕೊಡ ಮಾಡುವ ಅಧಿಕ ಹೋಮ್‌ವರ್ಕ್ ಹೊರೆ ಇಡೀ ಕುಟುಂಬದ ಸದಸ್ಯರ ನೆಮ್ಮದಿ ಕೆಡಿಸುತ್ತದೆ. ಹೋಮ್‌ವರ್ಕ್ ಮುಗಿಯುವ ವರೆಗೂ ಆ ಮಗು ರಜೆಯ ಸವಿ ಅನುಭವಿಸಲು ಆಗುವುದಿಲ್ಲ. ಕುಟುಂಬದ ಇತರ ಸದಸ್ಯರು ಹಬ್ಬದ ರಜೆಯ ಸಂತೋಷದಲ್ಲಿದ್ದರೆ ಕೋಣೆಯಲ್ಲಿ ಕದ ಹಾಕಿ ಪುಟ್ಟ ಮಕ್ಕಳು ಹೋಮ್‌ವರ್ಕ್ ಸಜೆ ಅನುಭವಿಸುವುದು ಎಷ್ಟು ಸರಿ?

ಹೋಮ್‌ವರ್ಕ್ ಕೊಡಲೇಬೇಡಿ ಎನ್ನುವುದು ಇಲ್ಲಿಯ ವಾದವಲ್ಲ. ಮಕ್ಕಳ ವಯೋಮಿತಿ, ಅವರ ಗ್ರಹಿಸುವ, ತಾಳಿಕೊಳ್ಳುವ ಶಕ್ತಿ ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡೇ ಹೋಮ್‌ವರ್ಕ್ ಕೊಡಬೇಕು. ಆಗ ಮಕ್ಕಳ ಮತ್ತು ಶಿಕ್ಷಕರ ಶ್ರಮವೂ ಸಾರ್ಥಕವಾಗುತ್ತದೆ. ■